ಚಿಕ್ಕವಳಿರುವಾಗ ನನ್ನನ್ನು ತುಂಬಾ ಮುಜುಗರಕ್ಕೀಡು ಮಾಡುತ್ತಿದ್ದದ್ದು ಎಂದರೆ ಈ ಹೇನುಗಳು. ಅದೆಲ್ಲಿಂದ ಬಂದು ಸೇರಿಕೊಳ್ಳುತ್ತಿದ್ದವೋ ಅಥವಾ ತಲೆಯಲ್ಲಿಯೇ ಹುಟ್ಟಿಕೊಳ್ಳುತ್ತಿದ್ದವೋ ಗೊತ್ತಿಲ್ಲ. ಆದರೆ ನನ್ನ ತಲೆಯಲ್ಲಿ ಮಾತ್ರ ಯಾವಾಗಲೂ ಹೇನು ತಪ್ಪುತ್ತಿರಲಿಲ್ಲ. ಜೊತೆಗೆ ಅದರಿಂದುಂಟಾಗುತ್ತಿದ್ದ ಅವಮಾನ ಮತ್ತು ನಾಚಿಕೆಯೂ ತಪ್ಪುತ್ತಿರಲಿಲ್ಲ.

ಈ ಹೇನುಗಳ ಕಾಟ ಒಂದೇ ಎರಡೇ. ಅವು ತಲೆಯಲ್ಲಿ ವಿಪರೀತ ತುರಿಕೆ ಉಂಟು ಮಾಡಿದರೂ ಎದುರಿದ್ದವರ ಮುಂದೆ ಮುಜುಗರದಿಂದ ಪಾರಾಗಲು ಕಷ್ಟಪಟ್ಟು ತುರಿಸುವುದನ್ನು ತಡೆಹಿಡಿಯಬಹುದು. ಆದರೆ ಹೇನುಗಳೇನು ನಮ್ಮ ಗುಲಾಮರೇ? ನಮ್ಮ ತಲೆಯಲ್ಲಿಯೇ ಬಿಡಾರ ಹೂಡಿ, ನಮ್ಮ ರಕ್ತವನ್ನೇ ಕುಡಿಯುತ್ತಿದ್ದರೂ ಅವೇನು ನಮ್ಮ ಆಜ್ಞೆ ಪಡೆದು ಓಡಾಡುತ್ತವೆಯೇ ಅಥವಾ ಅವುಗಳಿಗೆ ಕೂದಲಿನ ಮೇಲೆ ಬೇರೆಯವರ ಎದುರು ಕಾಣಿಸಿಕೊಳ್ಳದಂತೆ ಕರ್ಫ್ಯೂ ವಿಧಿಸಲು ಆಗುವುದೆ? ಕಾಮನ್‌ಸೆನ್ಸ್ ಇಲ್ಲದ ನಾನ್ಸೆನ್ಸ್‌ಗಳು ಅವು. ಎಲ್ಲೆಂದರಲ್ಲಿ ಸ್ವಚ್ಛಂದ ವಿಹರಿಸುತ್ತಾ ನಮ್ಮ ತಲೆಯ ಮೇಲೆ ಅವುಗಳ ಅಸ್ತಿತ್ವವನ್ನು ಜಗಜಾಹೀರು ಮಾಡಿ ಬೇರೆಯವರು, 'ಅಯ್ಯೋ ಅವ್ಳ ಮಂಡೆಂಗೆ ಹೇನು ಬುದು ಬುದು ಅಂಥೋ' ಅನ್ನೋ ಹಾಗೆ ಮಾಡಿ ನಮ್ಮನ್ನು ತಲೆ ತಗ್ಗಿಸುವ ಹಾಗೆ ಮಾಡಿ ಬಿಡುತ್ತಿದ್ದವು. ಜಿರಲೆಗಳಿಗೆ, ಇರುವೆಗಳಿಗೆ ಹಾಕಿದ ಹಾಗೆ ಅವುಗಳಿಗೆ ಲಕ್ಷ್ಮಣ ರೇಖೆಯನ್ನು ಎಳೆಯುವುದು ಸಾಧ್ಯವೇ? ತಿಗಣೆಗಳಿಗೆ ಔಷಧ ಸಿಂಪಡಿಸಿದಂತೆ ಅವಕ್ಕೆ ಸಿಂಪಡಿಸಲು ಆಗುವುದೇ? ಒಟ್ಟಿನಲ್ಲಿ ಯಾವ ಅಳುಕು ಅಂಜಿಕೆ ಇಲ್ಲದೆ ನಮ್ಮ ತಲೆಯಲ್ಲಿ ಅಕ್ರಮ ಸಕ್ರಮ ಮಾಡಿಕೊಂಡು ವಿಐಪಿಗಳಂತೆ ವಿಹರಿಸುತ್ತವೆ.

ಆಗಿನ ಕಾಲದ ಫ್ಯಾಶನ್ ಜಡೆಗಳಾದ ಈ ಸ್ಟೆಪ್ ಜಡೆ ಏನಾದರೂ ಹಾಕಿಕೊಳ್ಳೋಣ ಎಂದರೆ ಅಂಜಿಕೆ ಈ ಸೀರುಗಳದ್ದು. ಮುತ್ತು ಪೋಣಿಸಿದ ಹಾಗೆ ಕೂದಲಿನ ಎಳೆ ಎಳೆಗೂ ಆತು ಕೂತ ಇವು ಮದುವೆ ಮನೆಯಲ್ಲಿ ಸ್ವಾಗತಿಸಲು ಮಂಟಪದ ಹೊರಗೆ